**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್ ಸಂಖ್ಯೆಃ 5028/2023**

**ಪ್ರಾಸಾ -- 4**

**ಚಾಸಾ -- 5**

ಸಾಕ್ಷಿಯ ಹೆಸರು – ಕಾವೇರಿ
ಗಂಡನ ಹೆಸರು – ರಾಜು
ವಯಸ್ಸು – 40 ವರ್ಷ
ವೃತ್ತಿ – ಕೂಲಿ ಕೆಲಸ
ವಿಳಾಸ – ಬೇಗೂರು ಗ್ರಾಮ

ದಿಃ 08.11.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 2 ನನ್ನ ತಂದೆ. ಚಾಸಾ 1 ನನ್ನ ತಮ್ಮ. ನಾನು ಒಂದು ವರ್ಷದ ಹಿಂದೇ ಮುಕ್ಕಾಟಿರ ಕಿರಣ್ ರವರ ತೋಟದಲ್ಲಿ ಕೆಲಸ ಮಾಡಿಕೊಂಡು ಅವರ ಲೈನ್ ಮನೆಯಲ್ಲಿ ವಾಸವಾಗಿದ್ದೆ. ಒಂದು ವರ್ಷದ ಹಿಂದೆ ಚಾಸಾ 1 ರವರು ಚಾಸಾ 3 ರವರ ತೋಟದಲ್ಲಿ ಕೆಲಸ ಮಾಡಿಕೊಂಡು ಆತನ ಪತ್ನಿ ಮೊಣ್ಣಿಯೊಂದಿಗೆ ಲೈನ್ ಮನೆಯಲ್ಲಿ ವಾಸವಾಗಿದ್ದರು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ಆರೋಪಿ ಚಾಸಾ 1 ಹಾಗೂ ಆತನ ಪತ್ನಿ ವಾಸವಾಗಿದ್ದ ಲೈನ್ ಮನೆಯ ಪಕ್ಕದಲ್ಲಿ ವಾಸವಾಗಿದ್ದರು.

2. ಈಗ್ಗೆ 2 ವರ್ಷಗಳ ಹಿಂದೆ ಸಾಹುಕಾರರು ಚಾಸಾ 1 ರವರ ಹೆಂಡತಿ ಸತ್ತುಹೋಗಿದ್ದಾರೆ ಬನ್ನಿ ಎಂದು ಹೇಳಿದರು. ಮಾರನೇ ದಿನ ಬೆಳಿಗ್ಗೆ ನಾನು ಹಾಗೂ ನನ್ನ ಗಂಡ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿ ಮೊಣ್ಣಿಯ ಮೃತ ದೇಹ ನೋಡಿದ್ದೆವು. ಮೊಣ್ಣಿಯ ಕತ್ತಿನ ಬಳಿ ಗಾಯ ಆಗಿತ್ತು. ಚಾಸಾ 1 ರವರು ನನ್ನ ಬಳಿ ಆರೋಪಿಯು ಹಿಂದಿನ ದಿನ ರಾತ್ರಿ ನನಗೆ ಕತ್ತಿಯಲ್ಲಿ ಕಡಿಯಲು ಬಂದಿದ್ದು, ಮೊಣ್ಣಿ ತಡೆಯಲು ಬಂದಾಗ ಆರೋಪಿಯು ಕತ್ತಿಯಿಂದ ಮೊಣ್ಣಿಯ ಕುತ್ತಿಗೆಗೆ ಕಡಿದಿರುತ್ತಾರೆ ಎಂದು ಹೇಳಿದರು. ಆ ದಿನ ರಾತ್ರಿ ಆರೋಪಿ, ಚಾಸಾ 1 ಹಾಗೂ ಮೊಣ್ಣಿ ಊಟ ಮಾಡಿದ ನಂತರ ಆರೋಪಿಯು ಆತನ ಮನೆಗೆ ವಾಪಸ್ಸು ಹೋಗಿ ಪುನಃ ಚಾಸಾ 1

ವಾಸವಾಗಿದ್ದ ಲೈನ್ ಮನೆಯ ಬಳಿ ಬಂದು ಜಗಳ ಮಾಡಿ ಎರವರ ಸೂಳೆ ಮಕ್ಕಳು ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆಗ ಚಾಸಾ 1 ರವರು ಆತನಿಗೆ ಹೋಗಿ ಮಲಗಿಕೋ ಎಂದು ಹೇಳಿದ್ದು, ಆಗ ಆರೋಪಿ ಆತನ ಮನೆಗೆ ಹೋಗಿ 2 ಕತ್ತಿಗಳನ್ನು ಹಿಡಿದು ಬೀಸಿಕೊಂಡು ಬಂದಿದ್ದು ಚಾಸಾ 1 ರವರು ಅವಿತುಕೊಳ್ಳಲು ಓಡಿದ್ದು ಆಗ ಮೊಣ್ಣಿ ತಡೆಯಲು ಬಂದಿದ್ದು ಆರೋಪಿಯು ಕತ್ತಿಯಿಂದ ಮೊಣ್ಣಿಯ ಕತ್ತಿಗೆ ಕಡಿದಿರುತ್ತಾರೆ ಎಂದು ಚಾಸಾ 1 ನನ್ನ ಬಳಿ ಹೇಳಿರುತ್ತಾರೆ. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ಮೊಣ್ಣಿಯ ಮೃತ ದೇಹ ಕಾಣಿಸುತ್ತಿದೆ. ಸದರಿ ಛಾಯಾಚಿತ್ರಗಳನ್ನು ಈಗಾಗಲೇ ನಿಪಿ 9 ರಿಂದ 12 ಎಂದು ಗುರುತಿಸಲಾಗಿದೆ.

3. ಆರೋಪಿಯ ವಿರುದ್ದ ಪ್ರಕರಣದ ದಾಖಲಾಗಿರುತ್ತದೆ. ಪೊ. ಠಾಣೆಯಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

4. ನಾನು ಸಮಯ ಸಿಕ್ಕಾಗ ಚಾಸಾ 1 ರವರ ಮನೆಗೆ ಹೋಗಿ ಬರುತ್ತಿದ್ದೆ ಎಂದರೆ ಸರಿ. ನನ್ನ ತಂದೆ ಕೂಡ ಚಾಸಾ 1 ರವರ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಸರಿ. ಘಟನೆಯಾಗುವ ಒಂದು ವಾರದ ಹಿಂದೆ ನನ್ನ ತಂದೆ ಚಾಸಾ 1 ರವರ ಮನೆಗೆ ಹೋಗಿ ಅಲ್ಲೇ ವಾಸವಾಗಿದ್ದರು ಎಂದರೆ ಸರಿ. ದಿಃ 18.05.2023 ರಂದು ಮಧ್ಯ ರಾತ್ರಿ ಚಾಸಾ 3 ರವರು ನನ್ನ ಮೊಬೈಲ್ ಗೆ ಫೋನ್ ಮಾಡಿ ಚಾಸಾ 1 ರವರ ಹೆಂಡತಿ ಮೊಣ್ಣಿಯನ್ನು ಲೈನ್ ಮನೆಯಲ್ಲಿ ಇದ್ದ ಆರೋಪಿ ಶ್ರೀನಿವಾಸ ಕುತ್ತಿಗೆಯ ಭಾಗಕ್ಕೆ ಕಡಿದು ಕೊಲೆ ಮಾಡಿದ್ದು ಮೊಣ್ಣಿಯ ಮೃತದೇಹ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇದೆ ಎಂದು ನನಗೆ ಹೇಳಿದ್ದರು ಎಂದರೆ ಸರಿ. ರಾತ್ರಿ 10.15 ಗಂಟೆಗೆ ಆರೋಪಿಯು ಚಾಸಾ 1 ಹಾಗೂ ಆತನ ಪತ್ನಿ ಮೊಣ್ಣಿಯನ್ನು ಉದ್ದೇಶಿಸಿ ಎರವ ಸೂಳೆ ಮಕ್ಕಳೇ ನಿಮ್ಮಿಬ್ಬರನ್ನು ಕೊಲ್ಲದೇ ಬಿಡುವುದಿಲ್ಲ ಎಂದು

ಜೋರಾಗಿ ಬೈಯುತ್ತಾ ಚಾಸಾ 1 ರವರ ಮನೆಯ ಬಳಿ ಬಂದಿದ್ದರು ಎಂದು ಚಾಸಾ 1 ನನಗೆ ಹೇಳಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

5. ನಾನು ಅವಿದ್ಯಾವಂತೆ. ನನ್ನ ಹತ್ತಿರ ಮೊಬೈಲ್ ಫೋನ್ ಇಲ್ಲ. ನನಗೆ ಮೊಬೈಲ್ ಫೋನ ಹೇಗೆ ಉಪಯೋಗಿಸುವುದು ಎಂದು ಗೊತ್ತಿಲ್ಲ. ನಾನು ಬೇಗೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ನಮ್ಮ ಮನೆಯಿಂದ ಚಾಸಾ 1 ರವರ ಮನೆ ಸುಮಾರು 4 ಕಿಮಿ ಅಂತರದಲ್ಲಿ ಇದೆ. ನಾನು ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುತ್ತಿದ್ದೇನೆ. ಬೆಃ 8.00 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 4.00 ಗಂಟೆಗೆ ವಾಪಸ್ಸು ಬರುತ್ತೇನೆ. ನಾನು ಚಾಸಾ 1 ರವರ ಮನೆಗೆ ಆಗಾಗ ಹೋಗಿ ಬರುತ್ತಿದ್ದೆ. ಚಾಸಾ 1 ರವರ ಮನೆ ಎಷ್ಟು ದೊಡ್ಡದು ಇದೆ, ಯಾವ ಬಣ್ಣದ್ದು ಅದನ್ನುವುದು ನನಗೆ ಹೇಳಲು ಆಗುವುದಿಲ್ಲ. ಚಾಸಾ 1 ರವರ ಮನೆಗೆ ವಿದ್ಯುತ್ ಸಂಪರ್ಕ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆರೋಪಿ ಹಾಗೂ ಚಾಸಾ 1 ರವರ ಸಂಬಂಧ ಅನ್ಯೋನ್ಯವಾಗಿತ್ತು ಎಂದರೆ ಸರಿ. ಅವರಿಬ್ಬರೂ ಜೊತೆಯಾಗಿ ಊಟ ಮಾಡುತ್ತಿದ್ದರು, ಮದ್ಯ ಸೇವಿಸುತ್ತಿದ್ದರು ಎಂದರೆ ಸರಿ. ಈ ಬಗ್ಗೆ ನಾನು ಖುದ್ದಾಗಿ ನೋಡಿದ್ದೇನೆ ಹಾಗೂ ಚಾಸಾ 1 ಕೂಡ ಆತ ಆರೋಪಿಯೊಂದಿಗೆ ಚೆನ್ನಾಗಿ ಇದ್ದ ಬಗ್ಗೆ ನನಗೆ ಹೇಳಿದ್ದರು ಎಂದರೆ ಸರಿ. ಶಂಕರ ಮೊಣ್ಣಿಯ ಮೊದಲನೇ ಗಂಡ. ಶಂಕರ ಮದ್ಯ ಸೇವಿಸಿಕೊಂಡು ಬಂದು ಮೊಣ್ಣಿಗೆ ಹೊಡೆಯುತ್ತಿದ್ದರು ಎಂದರೆ ಸರಿ. ಚಾಸಾ 1 ರವರು ಮೊಣ್ಣಿಯನ್ನು ಪ್ರೀತಿಸಿ ಶಂಕರನಿಗೆ ಹೇಳದೇ ಆಕೆಯನ್ನು ಚಾಸಾ 3 ರವರ ತೋಟದ ಲೈನ್ ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ಶಂಕರನಿಗೆ ಈ ವಿಷಯದಲ್ಲಿ ಚಾಸಾ 1 ರವರ ಮೇಲೆ ದ್ವೇಷ ಇತ್ತು ಎಂದರೆ ಸರಿ. ನನಗೆ ದಿನನಿತ್ಯ ಸಂಜೆ ಮದ್ಯ ಸೇವಿಸುವ ಅಭ್ಯಾಸ ಇದೆ. ದಿನನಿತ್ಯ ನನ್ನ ತಮ್ಮ ಹಾಗೂ ತಂದೆ ಮದ್ಯ ಸೇವಿಸುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ವಿಪರೀತ ಮದ್ಯ ಸೇವಿಸಿದರೆ ಯಾರು ಏನು ಹೇಳುತ್ತಾರೆ, ಏನು ಮಾಡುತ್ತಾರೆ ಎಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ಅಷ್ಟು ವಿಪರೀತ ಮದ್ಯ ಸೇವಿಸುವುದಿಲ್ಲ. ನನಗೆ ದೃಷ್ಟಿದೋಷ ಇಲ್ಲ, ನಾನು ಕನ್ನಡಕ ಬಳಸುವುದಿಲ್ಲ. ಶಂಕರ ಆತನ ಹೆಂಡತಿಯನ್ನು ಚಾಸಾ 1 ರವರು ಕರೆದುಕೊಂಡು ಬಂದಿದ್ದ ಬಗ್ಗೆ ಚಾಸಾ 1 ರವರ ಜೊತೆ ಆಗಾಗ ಬಂದು

ಜಗಳ ಮಾಡುತ್ತಿದ್ದರು ಎಂದರೆ ಸರಿ. ಚಾಸಾ 1 ರವರು ಮದ್ಯಪಾನ ಮಾಡಿದ್ದು ನಾನೂ ಕೂಡ ಮದ್ಯಪಾನ ಮಾಡಿದ್ದೆ, ಚಾಸಾ 1 ಏನು ಹೇಳಿದ್ದರು ಎಂದು ನನಗೆ ಗೊತ್ತಾಗಿರಲಿಲ್ಲ ಎಂದರೆ ಸರಿಯಲ್ಲ. ಶಂಕರ ಮೊಣ್ಣಿಗೆ ಹಲ್ಲೆ ಮಾಡಿ ಆಕೆ ಮೃತಪಟ್ಟಿದ್ದರೂ ಕೂಡ ಶಂಕರನನ್ನು ರಕ್ಷಿಸುವ ಉದ್ದೇಶದಿಂದ ಆರೋಪಿ ಮೊಣ್ಣಿಗೆ ಹಲ್ಲೆ ಮಾಡಿದ್ದಾರೆ ಎಂದು ಚಾಸಾ 1 ನನ್ನ ಬಳಿ ಹೇಳಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಶಂಕರರವರಿಗೆ ಹೆದರಿ ಆರೋಪಿ ಶ್ರೀನಿವಾಸ ಮೊಣ್ಣಿಗೆ ಕತ್ತಿಯಿಂದ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್ ಸಂಖ್ಯೆಃ 5028/2023**

**ಪ್ರಾಸಾ -- 5**

**ಚಾಸಾ --4**

ಸಾಕ್ಷಿಯ ಹೆಸರು – ಪೂವಣ್ಣ ಜೆ ಎಂ

ತಂದೆಯ ಹೆಸರು – ಜೆ ಕೆ ಮನಮೋಹನ್

ವಯಸ್ಸು – 40 ವರ್ಷ

ವೃತ್ತಿ – ಖಾಸಗಿ ಕೆಲಸ

ವಿಳಾಸ – ಕುಂದಾ ಗ್ರಾಮ

ದಿಃ 08.11.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 3 ನನ್ನ ತಂದೆ. ನಾನು ನನ್ನ ತಂದೆಯ ಜೊತೆ ವಾಸವಾಗಿದ್ದೇನೆ. ನನ್ನ ತಂದೆಗೆ ಮುಗುಟಗೇರಿ ಕುಂದ ಗ್ರಾಮದಲ್ಲಿ ಕಾಫಿ ತೋಟ ಇದೆ, ಸದರಿ ಕಾಫಿ ತೋಟದಲ್ಲಿ ಲೈನ್ ಮನೆಗಳು ಇವೆ. ಒಂದು ವರ್ಷದ ಹಿಂದೆ ಒಂದು ಲೈನ್ ಮನೆಯಲ್ಲಿ ಚಾಸಾ 1 ಹಾಗೂ ಆತನ ಪತ್ನಿ ಮೊಣ್ಣಿ ವಾಸವಾಗಿದ್ದರು ಹಾಗೂ ಪಕ್ಕದ ಲೈನ್ ಮನೆಯಲ್ಲಿ ಆರೋಪಿ ಶ್ರೀನಿವಾಸ ವಾಸವಾಗಿದ್ದರು.

2. ದಿಃ 18.05.2023 ರಂದು ರಾತ್ರಿ 9.30 – 10.00 ಗಂಟೆಯ ಸುಮಾರಿಗೆ ಚಾಸಾ 1 ರವರು ನಮ್ಮ ಮನೆಗೆ ಬಂದಿದ್ದು ಆಗ ನಮ್ಮ ಮನೆಯಲ್ಲಿ ನಾನು ಹಾಗೂ ನನ್ನ ತಂದೆ ಇದ್ದೆವು. ಆರೋಪಿ ಶ್ರೀನಿವಾಸ ಮೊಣ್ಣಿಗೆ ಕತ್ತಿಯಿಂದ ಕಡಿದಿದ್ದು ಆಕೆ ಬಿದ್ದು ಹೋಗಿದ್ದಾಳೆ ಎಂದು ಚಾಸಾ 1 ನಮಗೆ ಹೇಳಿದರು. ನಾನು ಹಾಗೂ ಚಾಸಾ 3 ರವರು ಚಾಸಾ 1 ವಾಸವಾಗಿದ್ದ ಲೈನ್ ಮನೆಯ ಬಳಿ ಹೋದಾಗ ಲೈನ್ ಮನೆಯ ಹೊರಗಡೆ ಮೊಣ್ಣಿ ಬಿದ್ದಿದ್ದರು. ಆಕೆಯ ಎಡ ಕತ್ತಿನ ಬಳಿ ಕತ್ತಿಯಿಂದ ಕಡಿದ ಗಾಯ ಆಗಿತ್ತು. ಆಕೆಯನ್ನು ನೋಡಿದಾಗ ಆಕೆ ಸ್ವಲ್ಪ ಉಸಿರಾಡುತ್ತಿದ್ದು ಅಂಬುಲೆನ್ಸ್ ಕರೆಸಿದ್ದೆವು ಹಾಗೂ ಪೊ. ಠಾಣೆಗೆ ಹೋದೆವು. ಆಕೆಯನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕಳುಹಿಸಿದ್ದೆವು. ನಾನು ಹಾಗೂ ಚಾಸಾ 3 ರವರು ಬೇರೆ ವಾಹನದಲ್ಲಿ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ವೈದ್ಯರು ಮೊಣ್ಣಿ ಮೃತಪಟ್ಟಿದ್ದಾರೆ ಎಂದು ಹೇಳಿದರು. ನಾವು ಚಾಸಾ 1 ರವರನ್ನು

ವಿಚಾರಿಸಿದಾಗ ಚಾಸಾ 1 ರವರು ನಾನು, ಮೊಣ್ಣಿ ಹಾಗೂ ಶ್ರೀನಿವಾಸ ಊಟ ಮಾಡಿ ಮಾತನಾಡುತ್ತಿದ್ದಾಗ ಮಾತಿಗೆ ಮಾತು ಬೆಳೆದು ಆರೋಪಿ ಶ್ರೀನಿವಾಸ ಕತ್ತಿಯಿಂದ ಚಾಸಾ 1 ರವರನ್ನು ಕಡಿಯಲು ಬಂದಾಗ ಚಾಸಾ 1 ರವರು ತಪ್ಪಿಸಿಕೊಂಡಿದ್ದು, ಆಗ ಆರೋಪಿ ಮೊಣ್ಣಿಗೆ ಕತ್ತಿಯಿಂದ ಕಡಿದಿದ್ದಾರೆ ಎಂದು ಹೇಳಿದರು. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ಮೊಣ್ಣಿಯ ಮೃತ ದೇಹ ಕಾಣಿಸುತ್ತಿದೆ. ಅವುಗಳನ್ನು ಈಗಾಗಲೇ ನಿಪಿ 9 ರಿಂದ 12 ಎಂದು ಗುರುತಿಸಲಾಗಿದೆ.

3. ದಿಃ 19.05.2023 ರಂದು ಮದ್ಯಾಹ್ನ ಪೊಲೀಸರು ಚಾಸಾ 1 ವಾಸವಾಗಿದ್ದ ಲೈನ್ ಮನೆಯ ಬಳಿ ಬಂದಿದ್ದು, ನನಗೆ ನೋಟೀಸು ನೀಡಿರುತ್ತಾರೆ. ಸದರಿ ನೋಟೀಸನ್ನು ನಿಪಿ 13 ಎಂದು ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು. ಆಗ ಚಾಸಾ 1 ಕೃತ್ಯ ಸ್ಥಳವನ್ನು ತೋರಿಸಿರುತ್ತಾರೆ. ಆಗ ಪೊಲೀಸರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ಸ್ಥಳದಲ್ಲಿ ರಕ್ತದ ಕಲೆಗಳು ಇದ್ದು, ಪೊಲೀಸರು ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು ಹಾಗೂ ಒಂದು ಟಾರ್ಚನ್ನು ಜಪ್ತು ಮಾಡಿದ್ದರು. ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ಡಬ್ಬಿಗೆ ಹಾಕಿದರು. ಆ ಸಮಯದಲ್ಲಿ ಪೊಲೀಸರು ಮಹಜರನ್ನು ಬರವಣಿಗೆ ಮಾಡಿದ್ದರು. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೆ. ನನ್ನೊಂದಿಗೆ ಕುಮಾರ ಹಾಗೂ ಅಪ್ಪು ಕೂಡ ಮಹಜರಿಗೆ ಸಹಿ ಮಾಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು. ನಿಪಿ 2 ಮಹಜರು ಮಾಡುವ ಸಮಯದಲ್ಲಿ ಪೊಲೀಸರು ಫೋಟೋ ತೆಗೆದಿದ್ದರು. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ 3 ರಿಂದ 7 ಎಂದು ಗುರುತಿಸಲಾಗಿದೆ. ಪೊಲೀಸರು ಜಪ್ತು ಮಾಡಿದ್ದ ರಕ್ತ ಮಿಶ್ರಿತ ಮಣ್ಣನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು, ಸಾದಾ ಮಣ್ಣು ನ್ನು ಈಗಾಗಲೇ ಮು ಮಾ 2 ಎಂದು ಹಾಗೂ ಒಂದು ಟಾರ್ಚನ್ನು ಈಗಾಗಲೇ ಮು ಮಾ 3 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

4. ದಿಃ 19.05.2023 ರಂದು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರು ಮೊಣ್ಣಿಯ ಮೃತದೇಹದ ಶವ ಪಂಚನಾಮೆಯನ್ನು ದೇವಿಕಾ, ಸಿದ್ದಾರ್ಥ ಹಾಗೂ ರಾಜು ಎನ್ನುವ ಸಾಕ್ಷಿದಾರರ ಸಮಕ್ಷಮ ಮಾಡಿದ್ದು, ಆ ಸಮಯದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

5. ನಾನು ಬಿ ಎ ಪದವೀಧರ. ನಾನು ಹುಟ್ಟಿದಾಗಿನಿಂದಲೂ ಮುಗಟಗೇರಿ ಕುಂದಾ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ತಂದೆಗೆ ಕಾಫಿ ತೋಟ ಇದೆ. ನನ್ನ ತಂದೆಯ ಕಾಫಿ ತೋಟ ಸುಮಾರು 8 ರಿಂದ 10 ಎಕರೆ ವಿಸ್ತೀರ್ಣ ಇದೆ. ನಮ್ಮ ಮನೆ ಪೊನ್ನಂಪೇಟೆ ಪಟ್ಟಣದಿಂದ ಸುಮಾರು 3 ಕಿಮಿ ಅಂತರದಲ್ಲಿ ಇದೆ. ನಮ್ಮ ಕಾಫಿ ತೋಟ ಪೊನ್ನಂಪೇಟೆ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ. ಕಾಫಿ ತೋಟದಲ್ಲಿ ಲೈನ್ ಮನೆ ಕಟ್ಟಿಸಲು ಸರ್ಕಾರದಿಂದ ಪರವಾನಿಗೆ ಪಡೆದುಕೊಡಿದ್ದೆವು. ನಮ್ಮ ಕಾಫಿ ತೋಟದಲ್ಲಿ 3 ಲೈನ್ ಮನೆಗಳು ಇವೆ. ಪಂಚಾಯತ್ ನವರು ನೀಡಿದಂತಹ ಲೈನ್ ಮನೆ ನಂಬರನ್ನು ಲೈನ್ ಮನೆಯ ಮುಂದೆ ನಮೂದು ಮಾಡಿರುವುದಿಲ್ಲ. ನಮ್ಮ ಕಾಫಿ ತೋಟದಲ್ಲಿ ಲೈನ್ ಮನೆ ಇರುವ ಬಗ್ಗೆ ದಾಖಲೆಗಳನ್ನು ತನಿಖಾಧಿಕಾರಿಯವರಿಗೆ ನಾವು ನೀಡಿರುವುದಿಲ್ಲ. ನಮ್ಮ ಲೈನ್ ಮನೆಯಲ್ಲಿ ಇರುವವರು ಖಾಯಂ ಕಾರ್ಮಿಕರು. ನಮ್ಮ ಬಳಿ ಕೆಲಸ ಮಾಡುವ ಕಾರ್ಮಿಕರಿಗೆ ನೀಡುವ ಸಂಬಳ ಹಾಗೂ ಇತರೆ ಸವಲತ್ತಿನ ಬಗ್ಗೆ ಇತರೆ ವಿವರಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿರುತ್ತೇವೆ. ಸಂಬಂಧಪಟ್ಟ ದಾಖಲೆಗಳಲ್ಲಿ ಮೊಣ್ಣಿ, ಅಪ್ಪು ಹಾಗೂ ಶ್ರೀನಿವಾಸ್ ರವರು ನಮ್ಮಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ನಮೂದು ಇದೆ. ಆ ಪುಸ್ತಕವನ್ನು ತನಿಖಾಧಿಕಾರಿಯವರಿಗೆ ನಾನು ನೀಡಿರುವುದಿಲ್ಲ. ಮೊಣ್ಣಿ, ಅಪ್ಪು ಹಾಗೂ ಶ್ರೀನಿವಾಸ ನಮ್ಮ

ತೋಟದ ಲೈನ್ ಮನೆಯಲ್ಲಿ ವಾಸವಾಗಿರಲ್ಲಿ ಹಾಗೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತೋಟಕ್ಕೆ ಹೊರಗಿನಿಂದ ಕೆಲಸಗಾರರನ್ನು ಕರೆಸಿಕೊಳ್ಳುತ್ತೇವೆ. ಕೆಲಸಗಾರರ ವಿಳಾಸದ ಬಗ್ಗೆ ನಾವು ದಾಖಲೆಗಳನ್ನು ಪಡೆದುಕೊಳ್ಳುವುದಿಲ್ಲ. ನಮ್ಮ ಕಾಫಿ ತೋಟದ ಸುತ್ತಲು ತಂತಿ ಬೇಲಿ ಇದೆ. ನಿಮ್ಮ ತೋಟದ ಒಳಗೆ ಯಾರು ಬೇಕಾದರೂ ಬಂದು ಹೋಗಬಹುದು ಎಂದರೆ ಸಾಕ್ಷಿ ನುಡಿಯುತ್ತಾರೆ ಕೆಲಸದವರು ಬಂದು ಹೋಗಬಹುದು. ಸಾಮಾನ್ಯವಾಗಿ ನಾವು ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ ಅವರ ವರ್ತನೆ ನೋಡಿಕೊಂಡು ಒಂದು ವೇಳೆ ಅವರು ತೊಂದರೆ ಮಾಡುವ ಸ್ವಭಾವದವರಾದರೆ ಅವರನ್ನು ಖಾಯಂ ಆಗಿ ಕೆಲಸಕ್ಕೆ ನೇಮಿಸುವುದಿಲ್ಲ. ಆರೋಪಿ ಶ್ರೀನಿವಾಸ ನಮ್ಮ ಲೈನ್ ಮನೆಯಲ್ಲಿ ಬಾಡಿಗೆಗೆ ಇದ್ದರು. ಆರೋಪಿ ಶ್ರೀನಿವಾಸರವರಿಗೆ ಲೈನ್ ಮನೆ ಬಾಡಿಗೆ ನೀಡಿದ ಬಗ್ಗೆ ಯಾವುದೇ ಕರಾರನ್ನು ಮಾಡಿರುವುದಿಲ್ಲ. ಆರೋಪಿ ಶ್ರೀನಿವಾಸ ನೀವು ಕೆಲಸಕ್ಕೆ ಕರೆದಾಗ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ, ನಾವು ಅವರನ್ನು ಯಾವಾಗಲೂ ಕೆಲಸಕ್ಕೆ ಕರೆಸುತ್ತಿರಲಿಲ್ಲ, ಬೇಕಾದಾಗ ಕರೆಸುತ್ತಿದ್ದೆವು. ನಾವು ನಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರ ವಿವರವನ್ನು ಪೊ. ಠಾಣೆಗೆ ನೀಡಿರುವುದಿಲ್ಲ. ಆರೋಪಿ ಶ್ರೀನಿವಾಸ ನಮ್ಮ ಕಾಫಿ ತೋಟದಲ್ಲಿ ಕೆಲಸಕ್ಕೆ ಬರುತ್ತಿರಲಿಲ್ಲ, ಚಾಸಾ 1 ನಮ್ಮ ತೋಟದಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದು, ಆತ ಏನು ಹೇಳಿದ್ದಾರೆ ಅದನ್ನು ನಂಬಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಣ್ಣಿ ಶಂಕರನ ಪತ್ನಿ ಎಂದರೆ ಸಾಕ್ಷಿ ನುಡಿಯುತ್ತಾರೆ ಆಕೆ ಚಾಸಾ 1 ರವರ ಪತ್ನಿ. ಚಾಸಾ 1 ಮೋಸದಿಂದ ಶಂಕರನ ಪತ್ನಿಯನ್ನು ನಮ್ಮ ತೋಟದ ಲೈನ್ ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತೋಟದ ಆಗುಹೋಗುಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಗೆ ಸಿಸಿಟಿವಿ ಅಳವಡಿಸಿಲ್ಲ. ನಮ್ಮ ಮನೆಯ ಆಸುಪಾಸಿನಲ್ಲಿ ಎಲ್ಲಿಯೂ ಸಿಸಿಟಿವಿ ಇಲ್ಲ. ಮು ಮಾ 1 ಮತ್ತು 2 ನ್ನು ಗುರುತಿಸಲು ಯಾವುದೇ ನಿಖರವಾದ ಗುರುತು ಇಟ್ಟುಕೊಂಡಿಲ್ಲ. ಮು ಮಾ 3 ಯಾವ ಕಂಪನಿಯದ್ದು ಅನ್ನುವ ಬಗ್ಗೆ ನಾನು ನಿಖರವಾದ ಗುರುತನ್ನು ಇಟ್ಟುಕೊಂಡಿಲ್ಲ. ನಮ್ಮ ಕಾಫಿ ತೋಟದ ಲೈನ್ ಮನೆಗಳಲ್ಲಿ ಪ್ರತಿ ಲೈನ್ ಮನೆಗೆ ಎರಡೆರಡು ಬಲ್ಬುಗಳನ್ನು ಅಳವಡಿಸಲಾಗಿದೆ.

ಲೈನ್ ಮನೆಯ ವಿಸ್ತೀರ್ಣ ಗೊತ್ತಿಲ್ಲ. ಒಂದು ಲೈನ್ ಮನೆಯಲ್ಲಿ ಒಂದು ಕೋಣೆ, ಒಂದು ಬಾತ್ ರೂಮ್ ಟಾಯ್ಲೆಟ್, ಒಂದು ಕಿಟಕಿ ಇದೆ. ಕಿಟಕಿಯನ್ನು ಸಿಮೆಂಟ್ ನಲ್ಲಿ ಮಾಡಲಾಗಿದೆ. ಕಿಟಕಿಗೆ ಕಬ್ಬಿಣದ ರಾಡ್ ಅಳವಡಿಸಲಾಗಿದೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ಟಾಯ್ಲೆಟ್ ನ ಕಿಟಕಿಗೆ ಗ್ಲಾಸ್ ಅಳವಡಿಸಿದ್ದು ಗ್ಲಾಸನ್ನು ತೆಗೆದರೆ ಒಬ್ಬ ಮನುಷ್ಯ ಹೊರಗೆ ಹೋಗಬಹುದು. ಟಾಯ್ಲೆಟ್ ನ ಕಿಟಕಿಯ ವ್ಯಾಸ ಎಷ್ಟು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ತೋಟದ ಮಾಲೀಕರು ಲೈನ್ ಮನೆಯ ಒಳಗಡೆ ಹೋಗದೇ ಇರುವ ಕಾರಣ ಆ ಮನೆಯ ಒಳಗಡೆ ಏನು ಇದೆ, ಏನು ವ್ಯವಸ್ಥೆ ಇದೆ ಎಂದು ಮರೆತು ಹೋಗಿರುತ್ತಾರೆ ಎಂದರೆ ಸರಿ. ಲೈನ್ ಮನೆಯ ಹೊರಗಡೆ ಬೆಳಕಿನ ವ್ಯವಸ್ಥ ಇಲ್ಲ. ಅಲ್ಲಿ ರಾತ್ರಿ ಚಂದ್ರನ ಬೆಳಕು ಇಲ್ಲದಿದ್ದರೆ ಹೊರಗಡೆ ಏನೂ ಕಾಣಿಸುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ತೋಟದ ಲೈನ್ ಮನೆಗಳಲ್ಲಿ ರಾತ್ರಿ ಹೊತ್ತು ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದರೆ ಸರಿ. ವರ್ಷಗಟ್ಟಲೇ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಮಳೆಗಾಲದಲ್ಲಿ ವಿದ್ಯುತ್ ಸಂಪರ್ಕ ಇರುವುದಿಲ್ಲ. ನಾನು ನಿಪಿ 2 ರ ಮೇಲೆ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಿಪಿ 2 ರ ಮೇಲೆ ಮೊದಲು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ನ್ನು ನಾನು ಓದಿರುತ್ತೇನೆ. ಮಹಜರು ಮಾಡಿದ ಜಾಗದ ಚಕ್ಕುಬಂದಿ ನನಗೆ ಹೇಳಲು ಆಗವುದಿಲ್ಲ. ಶಂಕರ ಮೊಣ್ಣಿಯ ಸಾವಿಗೆ ಕಾರಣರಾಗಿದ್ದರೂ ಕೂಡ ಆ ವಿಷಯವನ್ನು ಮರೆಮಾಚಿ ಚಾಸಾ 1 ರವರಿಗೆ ನಿಷ್ಠಾವಂತ ಕೆಲಸಗಾರರಾಗಿರುವ ಕಾರಣ ಚಾಸಾ 1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ. ನಾನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿಲ್ಲ ಹಾಗೂ ಮೊಣ್ಣಿಯ ಮೃತದೇಹವನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಿಂದ 8 ಹಾಗೂ 9 ರಿಂದ 12 ಈ ಪ್ರಕರಣಕ್ಕಾಗಿ ಸೃಷ್ಟಿಸಿದ ಛಾಯಾಚಿತ್ರಗಳು ಎಂದರೆ ಸರಿಯಲ್ಲ. ಪೊಲೀಸರು ನನಗೆ ಒಂದು ವರ್ಷದ ಹಿಂದೆ ನೋಟೀಸು ನೀಡಿರಲಿಲ್ಲ. ನಿಪಿ 13 ರ ಮೇಲೆ ಎಲ್ಲಿ ಯಾವಾಗ ಯಾವ ಕಾರಣಕ್ಕಾಗಿ ಸಹಿ ಮಾಡಿದ್ದೀರಿ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ಮಹಜರು ಮಾಡುವ ಸಮಯದಲ್ಲಿ ನಿಪಿ 13 ರ ಮೇಲೆ ಸಹಿ ಮಾಡಿದ್ದೆ. ನಿಪಿ 2 ಹಾಗೂ 13 ರ ಮೇಲೆ ಪೊ. ಠಾಣೆಯಲ್ಲಿ ಸಹಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಲಿಖಿತವಾಗಿ ನೋಟೀಸು ನೀಡಿದ್ದರು. ನಿಪಿ 13 ಅರ್ಧ ಟೈಪ್ ಮಾಡಲಾಗಿದೆ, ಅರ್ಧ ಮಾಹಿತಿ ಲಿಖಿತವಾಗಿ ನಮೂದು ಮಾಡಲಾಗಿದೆ ಆದ ಕಾರಣ ನನಗೆ ನಿಪಿ 13 ರ ಪೂರ್ವ ಮಾಹಿತಿ ಇಲ್ಲ ಹಾಗೂ ನಿಪಿ 13 ರ ಮೇಲೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ನಿಷ್ಠಾವಂತ ಕೆಲಸಗಾರನಾಗಿದ್ದು ಆತನಿಗೆ ಸಹಾಯ ಮಾಡಲು ಅಮಾಯಕನಾದ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)